ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	363 (72)
ಉತ್ತರಿಸುವ ದಿನಾಂಕ	15-09-2021
ಮಾನ್ಯ ಸದಸ್ಯರ ಹೆಸರು	ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಮಡಿಕೇರಿ ತಾಲ್ಲೂಕು ಬೇತು ಗ್ರಾಮದ ಸರ್ವೆ ನಂ.52/3, 79, 54/1, 53, 53 ಮತ್ತು 52.2 ರಲ್ಲಿನ ಜಮೀನನ್ನು 30.07.2009 ರಲ್ಲಿ ವಾರಸುದಾರರು ಮಾರಾಟ ಮಾಡಿದ್ದು, ಈ ಮಾರಾಟ ಪ್ರಕ್ರಿಯೆಯಿಂದ ಸರ್ಕಾರಕ್ಕೆ ಸಲ್ಲಿಸಿರುವ ಉಪ ನೋಂದಣಿಯ ಕರವೆಷ್ಟು; ಹಾಗೂ ಸದರಿ ಗ್ರಾಮದ ಸರ್ವೆ ನಂಬರ್‌ಗಳಲ್ಲಿನ ಜಮೀನುಗಳಿಗೆ 2009 ರಲ್ಲಿ ಇದ್ದ ಮಾರ್ಗಸೂಚಿ ದರವೆಷ್ಟು; (ಮಾಹಿತಿ ನೀಡುವುದು)	ದಿನಾಂಕ: 30.07.2009 ರಂದು ಮಡಿಕೇರಿ ಉಪ ನೋಂದಣಿ ಕಛೇರಿಯಲ್ಲಿ ನೋಂದಣಿಯಾಗಿರುವ ದಸ್ತಾವೇಜು ಸಂಖ್ಯೆ: 417/2009-10ರ ಕ್ರಯ ಪತ್ರದ ಮೌಲ್ಯ ರೂ.37,00,000/- ಲಕ್ಷಕ್ಕೆ ಪಾವತಿಸಲಾದ ಮುದ್ರಾಂಕ ಶುಲ್ಕ ರೂ.2,50,860 ಮತ್ತು ನೋಂದಣಿ ಶುಲ್ಕ ರೂ.37,000 ಒಟ್ಟು ರೂ.2,87,860/- ಗಳಾಗಿರುತ್ತದೆ. 2009ರ ಸಾಲಿನ ಮಾರ್ಗಸೂಚಿ ದರಗಳು ಪ್ರತಿ ಎಕರೆಗೆ ಈ ಕೆಳಕಂಡಂತಿರುತ್ತದೆ. ಗ್ರಾಮ / ಬಾಣೆ ರೂ. / ತರಿ ರೂ. / ಬಾಗಾಯ್ತು ರೂ. / ಕಾಫಿ ರೂ. / ಏಲಕ್ಕಿ ರೂ. ಬೇತು / 100000 / 100000 / 200000 / 280000 / 200000
ಆ)	ಸದರಿ ಮೂಲ ವಾರಸುದಾರರು ಜಮೀನುಗಳನ್ನು ಮಾರಾಟ ಮಾಡುವ ಸಮಯದಲ್ಲಿ ಸರ್ಕಾರದ ಮಾರ್ಗಸೂಚಿ ಮೌಲ್ಯಕ್ಕಿಂತ ಕಡಿಮೆ ದರವನ್ನು ಉಪನೋಂದಣಿ ಮಾಡಿಸಿ ಮಾರಾಟ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಉಪನೋಂದಣಿ ಪ್ರಕ್ರಿಯೆಯಲ್ಲಿ ಭಾಗಿಯಾದ ಅಂದಿನ ಅಧಿಕಾರಿಗಳ ವಿರುದ್ಧ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)	ದಸ್ತಾವೇಜಿನಲ್ಲಿ ನಮೂದಿಸಿರುವಂತೆ ಸರ್ವೆ ನಂ.52/3 ರಲ್ಲಿ 0.60 ರೆಡೀಮ್ಡ್ ಸಾಗು ಜಾಗ, ಸರ್ವೆ ನಂ.79 ರಲ್ಲಿ 1.33 ರೆಡೀಮ್ಡ್ ಸಾಗು, ಜಾಗ ಸರ್ವೆ ನಂ.54/1 ರಲ್ಲಿ 3.70 ಎಕರೆ ಸಾಗು ಜಾಗ, ಸರ್ವೆ ನಂ.54/2 ರಲ್ಲಿ 5.13 ಸಾಗು ಜಾಗ, ಸರ್ವೆ ನಂ.52/2 ರಲ್ಲಿ 0.40 ಸಾಗು ಜಾಗ ಆಗಿದ್ದು, ಒಟ್ಟು 11.16 ಎಕರೆ ಕಾಫಿ ಜಾಗ ಆಗಿರುತ್ತದೆ ಹಾಗೂ ಸರ್ವೆ ನಂ.53 ರಲ್ಲಿ 5.34 ಸಾಗು ಎಂಬುದಾಗಿ ನೋಂದಣಿಯಾಗಿದ್ದು, ಈ ಜಾಗವು ತರಿ ಭೂಮಿಯಾಗಿದ್ದು ಒಟ್ಟು 16.5 ಎಕರೆ ನೋಂದಣಿಯಾಗಿರುವುದು ಕಂಡುಬಂದಿರುತ್ತದೆ. ಇದರಲ್ಲಿ 11.16 ಎಕರೆಗೆ (ಒಂದು ಎಕರೆಗೆ ಕಾಫಿ ತೋಟದ ದರ ರೂ.2,80,000/- ದಂತೆ) ರೂ.31,24,800/- ಹಾಗೂ 5.34 ಎಕರೆಗೆ (ಒಂದು ಎಕರೆಗೆ ತರಿ ಭೂಮಿಯ ದರ ರೂ.1,00,000 ದಂತೆ) ರೂ.5,34,000/- ಒಟ್ಟು ರೂ.36,58,800/- ಗಳಾಗುತ್ತದೆ. ದಸ್ತಾವೇಜಿನಲ್ಲಿ ರೂ.37,00,000/- ಮೌಲ್ಯ ನಮೂದಿಸಲಾಗಿರುತ್ತದೆ.

. . . 2

ಕ್ರ. ಸಂ.	ಪ್ರಶ್ನೆ	ಉತ್ತರ
		ಸದರಿ ಸ್ವತ್ತುಗಳಿಗೆ ಸಂಬಂಧಿಸಿದಂತೆ ನೋಂದಣಿಯಾದ ದಸ್ತಾವೇಜಿನಲ್ಲಿನ ಸ್ವತ್ತುಗಳ ಮೌಲ್ಯವು ಮಾರ್ಗಸೂಚಿ ದರಗಳಿಗಿಂತ ಕಡಿಮೆ ದರಕ್ಕೆ ನೋಂದಣಿ ಮಾಡಿರುವುದು ಕಂಡುಬಂದಿರುವುದಿಲ್ಲ.

ಸಂಖ್ಯೆ: ಕಂಇ/384/ಎಂಎಸ್‌ಎಸ್‌ಎ/2021

(ಆರ್.ಅಶೋಕ್)
ಕಂದಾಯ ಸಚಿವರು